# ಮುಳುಗಡೆ ಗ್ರಾಮಗಳಲ್ಲಿನ ಕೃಷಿ ಸಂಬಂಧಿ ಆಚರಣೆಗಳು

**ಪವಾಡೆಪ್ಪ ವಿ. ಮನಗೂಳಿ**

ಮುಖ್ಯಸ್ಥರು, ಇತಿಹಾಸ ವಿಭಾಗ, ಬ.ವಿ.ವಿ.ಸಂಘದ ದಾನಮ್ಮದೇವಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಿಳಾ ಮಹಾವಿದ್ಯಾಲಯ, ಮುಧೋಳ, ಬಾಗಲಕೋಟ.

**Received: 17/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14035247**

## ABSTRACT:

ಮನುಷ್ಯನಿಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ಜೀವಿಸಲು ನೀರು ಕೂಡ ಮುಖ್ಯ. ಪ್ರಾಚೀನ ಕಾಲದಿಂದಲೂ ಮನುಷ್ಯ ತಾನು ಬದುಕಲು, ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಬೆಳೆಯಲು ನದಿ ಮೂಲಗಳನ್ನೇ ಅವಲಂಬಿಸಿರುವುದನ್ನು ಕಾಣುತ್ತೇವೆ. ಹಾಗಾಗಿಯೇ ಜಗತ್ತಿನ ಎಲ್ಲಾ ನಾಗರಿಕತೆಗಳು ನದಿ ಬಯಲು ಪ್ರದೇಶಗಳಲ್ಲಿಯೇ ಬೆಳೆದು ಬಂದಿವೆ. ನದಿಗಳು ಕೇವಲ ಹರಿಯುವ ಜಲರಾಶಿ ಮಾತ್ರವಲ್ಲದೆ ಸಜೀವ ಶಕ್ತಿವಾಹಿನಿಗಳಾಗಿ ನಮ್ಮ ಮುಂದಿವೆ. ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಒಂದು ಕಾಲಕ್ಕೆ ಮನುಷ್ಯನ ಧಾರ್ಮಿಕ ಹಾಗೂ ಸಾಂಸ್ಕೃತಿಕತೆ ಬೆಳವಣಿಗೆಗೆ ಕಾರಣವಾಗಿದ್ದ ನದಿಗಳು ಇಂದು ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ವಿವಿಧೋದ್ದೇಶ ನೀರಾವರಿ ಯೋಜನೆಗಳಿಗೆ ಆವಾಸ ಸ್ಥಾನಗಳಾಗಿವೆ. ಈ ನಿಟ್ಟಿನಲ್ಲಿ ಭಾರತದ ಪ್ರಮುಖ ನದಿಗಳಲ್ಲಿ ಒಂದಾದ ಕೃಷ್ಣಾ ನದಿಯ ನೀರನ್ನು ಉಪಯೋಗಿಸಿಕೊಳ್ಳುವ ಸಂಬಂಧ ಕರ್ನಾಟಕ ಸರ್ಕಾರ ಜಾರಿಗೆ ತಂದ ಕೃಷ್ಣಾ ಮೇಲ್ದಂಡೆ ಯೋಜನೆಯು ಬಾಗಲಕೋಟೆ ಜಿಲ್ಲಾ ಭಾಗದಲ್ಲಿ ಹಲವಾರು ಬಗೆಯ ಸ್ಥಿತ್ಯಂತರಗಳನ್ನು ಸೃಷ್ಟಿಸಿದೆ. ಆ ಸ್ಥಿತ್ಯಂತರಗಳನ್ನು, ಅದರ ಹಿಂದಿನ ಬಹುಮುಖಿ ಆಯಾಮಗಳನ್ನು ಚಾರಿತ್ರಿಕ ನೆಲೆಯಲ್ಲಿ ಈ ಸಂಶೋಧನಾ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

## KEYWORDS:

ಕೃಷಿ ಆಚರಣೆ, ಸ್ಥಿತ್ಯಂತರ, ಉತ್ತರ ಕರ್ನಾಟಕ, ಜಾನುವಾರು, ಬೆಳೆಗಳು.

### ಪ್ರಸ್ತಾವನೆ:

“ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿದ್ದರೆ, ಆ ಬೆವಸಾಯದ ಘೋರವೇತಕಯ್ಯಾ? ಎಂದು ಹನ್ನೆರಡನೆಯ ಶತಮಾನದಲ್ಲಿ ವಚನಕಾರ ಅಲ್ಲಮಪ್ರಭು ಹೇಳಿರುವ ಮಾತು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಕೃಷ್ಣಾ ಮೇಲ್ದಂಡ ಯೋಜನೆಯ ಮುಳುಗಡೆ ಗ್ರಾಮಗಳಲ್ಲಿ ಕೇಳಿಬರುತ್ತಿದೆ.

ಭಾರತೀಯ ಚರಿತ್ರೆಯಲ್ಲಿ ಸಿಂಧೂ ಸಂಸ್ಕೃತಿಯಿಂದ ಸಾಗಿ ಬಂದ ಜಗತ್ತಿನ

ಅತಂತ್ಯ ಪ್ರಾಚೀನ ಸಂಸ್ಕೃತಿಯೊಡನೆ ಪ್ರಾರಂಭಗೊಂಡ ಕೃಷಿ ಕಾಯಕ ಇಂದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿಯಲ್ಲಿದೆ. ಕಾರಣ ಭಾರತ ವ್ಯವಸಾಯ ಪ್ರಧಾನ ದೇಶವೆಂಬುದು ಬಹುಹಿಂದಿನ ಖ್ಯಾತಿಯಾಗಿದ್ದು. ಪ್ರಸ್ತುತ ಈ ಖ್ಯಾತಿ ಬಹುತೇಕ ಕಳೆದು ಹೇಗಿದೆ. ಅದರಲ್ಲೂ ಜಾಗತೀಕರಣದ ಮಾಯಾ ಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಶೈಲಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ವೃತ್ತಿಯಾಗಿದೆ. ಕೃಷಿ ಕಾಯಕವನ್ನು ಬಿಡಲೂ ಆಗದ ಕಟ್ಟಿಕೋಳ್ಳಲು ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯಮಾನವಾಗಿದೆ. ಇದಕ್ಕೆ ಕೇವಲ ಆಧುನೀಕರಣದ ಅಂಶಗಳು ಮಾತ್ರ ಕಾರಣವಲ್ಲ; ಇದಕ್ಕೂ ಮುಂಚೆ ಹೊಸ ಹೊಸ ಆವಿಷ್ಕಾರಗಳ ಮೂಲಕ ಸರಕಾರಗಳು ಜಾರಿಗೆ ತಂದ ಹಲವಾರ ಯೋಜನೆಗಳು ಅದರಲ್ಲೂ ವಿಶೇಷವಾಗಿ ಹಸಿರು ಕ್ರಾಂತಿಯು ಸಾಕಷ್ಟು ಕೊಡುಗೆಯನ್ನು ನೀಡಿದೆ.[1] ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ವ್ಯವಸಾಯವನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿಸುವ ಪ್ರಯತ್ನಗಳು ತುಂಬಾ ಯಶ್ವಸಿಯಾಗಿವೆ.

‘‘ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಅದರೊಂದಿಗೆ ಕೃಷಿಗೆ ಅಂಟಿಕೊಂಡಂತೆ ಗ್ರಾಮೀಣ ಸಂಸ್ಕೃತಿಯನ್ನು ಸಮೃದ್ಧಗೋಳಿಸಿದ್ದ ಗುಡಿ ಕೈಗಾರಿಕೆಗಳು ತಮ್ಮ ಅಸ್ತಿತ್ವ ಕಳೆದುಕೊಂಡುವು. ನಮ್ಮ ಪೂರ್ವಜರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಹೀಗಾಗಿ ಕೃಷಿಯೆಂಬುದು ಒಂದು ನೆಲಮೂಲ ವಿಜ್ಞಾನವಾಗಿತ್ತು.[2] ಆದರೆ ಇಂದು ಇಂತಹ ನೆಲಮೂಲ ವಿಜ್ಞಾನ ಕಳೆದು ಹೋಗುತ್ತಿದೆ. ಅದರೊಂದಿಗೆ ಅದು ಹುಟ್ಟು ಹಾಕಿದ ಅನೇಕ ಸಂಪ್ರದಾಯ, ಆಚರಣೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಆಧುನಿಕತೆಯ ನೆಪದಲ್ಲಿ ಅಭಿವೃದ್ಧಿ ಎಂಬ ಮಾಯೆಯಲ್ಲಿ ಸರಕಾರದ ಅನೇಕ ನೀರಾವರಿ ಯೋಜನೆಗಳಿಂದ ಅನೇಕ ಕೃಷಿ ಭೂಮಿ, ಗ್ರಾಮಗಳು ಮುಳುಗಡೆಗೊಂಡಿದ್ದು ಅಲ್ಲಿನ ಜನರು ಕೃಷಿ ಕಾಯಕದಿಂದ ದೂರವಾಗುತ್ತಿದ್ದಾರೆ. ಇದರೆ ಪರಿಣಾಮವಾಗಿ ಮುಳುಗಡೆ ಗ್ರಾಮಗಳಲ್ಲಿನ ಅನೇಕ ಕೃಷಿ ಸಂಬಂಧಿ ಆಚರಣೆಗಳು ಕಣ್ಮರೆಯಾಗಿವೆ. ಅಂತಹ ಪ್ರಮುಖವಾದಂತಹ ಕೃಷಿ ಆಚರಣೆಗಳನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ. ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಹಾಗೂ ಆಚರಣೆಗಳ ಹಿನ್ನಲೆಯಲ್ಲಿ ಪ್ರಮುಖವಾಗಿ 5 ವಿಧಗಳಲ್ಲಿ ವಿವರಿಸಬಹುದಾಗಿದೆ;

1. **ಮಳೆ ಕುರಿತಾದ ಆಚರಣೆಗಳು**
2. **ಭೂಮಿ ಕುರಿತಾದ ಆಚರಣೆಗಳು**
3. **ಬೆಳೆ ಸಂಬಂಧಿ ಆಚರಣೆಗಳು**
4. **ಜಾನುವಾರಗಳ ಕುರಿತ ಆಚರಣೆಗಳು**

**ಮಳೆ ಕುರಿತಾದ ಆಚರಣೆಗಳು:**

**1. ಜೋಕುಮಾರನ ಹಬ್ಬ:**

ಉತ್ತರ ಕರ್ನಾಟಕದ ಮಳೆ ಸಂಬಂಧಿ ಆಚರಣೆಗಳಲ್ಲಿ ಜೋಕುಮಾರನ ಹಬ್ಬ ಅತ್ಯಂತ ಮಹತ್ವದಾಗಿದೆ. ಭಾದ್ರಪದ ಶುದ್ಧ ಅಷ್ಟಮಿಯ ದಿನ ಜೋಕುಮಾರನು ಹುಟ್ಟಿ ರೈತ ಮಕ್ಕಳಿಗೆ ಉತ್ತರಿ ಮಳೆ ತರುವನೆಂಬ ನಂಬುಗೆಯಿದೆ. ಈ ಸಂದರ್ಭದಲ್ಲಿ ಆತ ತನ್ನ ಕಾರ್ಯ ಮುಗಿಸಿ ಹೊರಡುವ ಮುನ್ನ ಆತನನ್ನು ಬುಟ್ಟಿಯಲ್ಲಿ ಹೊತ್ತು ಮನೆ-ಮನೆಗಳಿಗೆ ತಿರುಗಿ ಭೇಟಿ ನೀಡಿ ಜೋಳದ ನುಚ್ಚನ್ನು[3] ಪ್ರಸಾದ ರೂಪದಲ್ಲಿ ನೀಡಲಾಗುತ್ತದೆ. ಅದನ್ನು ಹೊಲದಲ್ಲಿ ಬಿತ್ತಿದರೆ ಜೋಳದ ಫಸಲು ಸಮೃದ್ಧವಾಗಿ ಬರುತ್ತದೆ ಎಂಬ ನಂಬಿಕೆ ಮುಳುಗಡೆ ಗ್ರಾಮಗಳಲ್ಲಿ ಕಂಡು ಬರುತ್ತದೆ. ಈ ಸಂದರ್ಭದಲ್ಲಿ ಬೆಸ್ತ ಹೆಣ್ಣು ಮಕ್ಕಳು ಬುಟ್ಟಿಯಲ್ಲಿ ಬೇವಿನ ಸೊಪ್ಪು ಸಂಗಡ ಮಣ್ಣಿನ ಮೂರ್ತಿಯೊಂದನ್ನು ಇಟ್ಟುಕೊಂಡು ಗ್ರಾಮದ ತುಂಬೆಲ್ಲಾ ಹಾಡು ಹೇಳುತ್ತಾ ಸಂಚರಿಸುತ್ತಾರೆ. ಜೋಕಮಾರ ಕುದುರೆ ಏರಿ ಸಂಚರಿಸುತ್ತಾ ಭೂಮಿಗೆ ಮಳೆ ತರುತ್ತಾನೆ, ಕೆರೆ-ಬಾವಿಗಳಿಗೆ ಜೀವ ತುಂಬುತ್ತಾನೆ ಎಂಬುದು ಅವರ ಹಾಡುಗಳ ಸಾರಾಂಶ.

ಹೆಣ್ಣು ಮಕ್ಕಳು ಬುಟ್ಟಿಯಲ್ಲಿ ಹೊತ್ತು ತರುವ ಮೂರ್ತಿ ಅಗಲವಾದ ಮುಖವನ್ನು ಹೊಂದಿದ್ದು ದೊಡ್ಡ ಗ್ರಾತದ ಕಣ್ಣುಗಳಿರುತ್ತವೆ. ಬಾಯಿ ಅಗಲವಾಗಿದ್ದು ಆತನ ಬಾಯಿಗೆ ಬೆಣ್ಣೆಯನ್ನು ಸವರಲಾಗಿರುತ್ತಾದೆ. ಹಣೆಗೆ ಕುಂಕುಮವಿದ್ದು ಆಕರ್ಷಕವಾದ ಹುರಿ ಮೀಸೆಯನ್ನು ಹೊಂದಿರುತ್ತಾನೆ. ಜೋಕುಮಾರ ಪೌರಾಣಿಕ ವ್ಯಕ್ತಿ. ಅವನ ಹುಟ್ಟು-ಸಾವಿನ ಕುರಿತಾದ ಅನೇಕ ಐತಿಹ್ಯಗಳಿವೆ.

ಜೋಕ ಮತ್ತು ಎಳೆಗೌರಿ ದಂಪತಿಗಳಿಗೆ ಬುಹುಕಾಲ ಸಂತಾನವಾಗದ ಕಾರಣ ಅವರು ಶಿವನನ್ನು ಕುರಿತು ಪ್ರಾರ್ಥಿಸುತ್ತಾರೆ. ಆಗ ಶಿವನು ಒಬ್ಬ ಮಗನನ್ನು ಅನುಗ್ರಹಿಸುತ್ತಾನೆ. ಆದರೆ ಆ ಮಗವಿಗೆ ಕೇವಲ ಏಳು ದಿನ ಮಾತ್ರ ಆಯಸ್ಸು ಇರುತ್ತದೆ. ಆದರೆ ಆತನದು ಶೀಘ್ರ ಬೆಳವಣಿಗೆ. ಇಂತಹ ಸಮಯದಲ್ಲಿ ಒಮ್ಮೆ ಮಳೆ ಬಾರದೆ ಬರಗಾಲ ಪ್ರಾರಂಭವಾಗಿರುತ್ತದೆ. ಜನರ ಕಷ್ಟ-ಸಂಕಟ ಮುಗಿಲು ಮುಟ್ಟುತ್ತದೆ. ಆಗ ಜೋಕುಮಾರ ಕುದುರೆಯನ್ನು ಏರಿ ಹೊಲ ಗದ್ದೆಗಳಲ್ಲಿ ಸಂಚರಿಸುತ್ತಾ ತನ್ನ ಮೇಲು ಹೊದಿಕೆಯನ್ನು ಜೋರಾಗಿ ಬೀಸಿದಾಗ ಅದರ ಸೆಳತಕ್ಕೆ ಚದುರಿದ ಮೋಡಗಳು ಮಳೆಯನ್ನು ಸೂರಿಸುತ್ತವೆ. ಇದರಿಂದಾಗಿ ಬೆಳೆಗಳು ಸಮೃದ್ಧವಾಗಿ ಬೆಳೆದು, ಬತ್ತಿದ ಕೆರೆ-ಹಳ್ಳಗಳು ತುಂಬಿ ಹರಿಯುತ್ತವೆ. ಇದರಿಂದ ಸಂತಸಗೊಂಡ ಜೋಕಮಾರ ಹಾಗೇ ಹೊಲ ಗದ್ದೆಗಳಲ್ಲಿ ಸಂಚರಿಸುತ್ತಿದ್ದಾಗ ಲಾವಣ್ಯವತಿಯಾದ ಒಬ್ಬ ಯುವತಿಯನ್ನು ಕಾಣುತ್ತಾನೆ. ಆಕೆ ಅಗಸರ ಯುವತಿಯಾಗಿದ್ದು ಅವಳನ್ನು

ಇಷ್ಟ ಪಟ್ಟ ಜೋಕುಮಾರನನ್ನು ಸಹಿಸದ ಯುವತಿಯ ತಂದೆಯು ಜೋಕಮಾರನ ತಲೆಯನ್ನು ಕತ್ತರಿಸಿ ನದಿಗೆ ಎಸೆದು ಬೀಡುತ್ತಾನೆ. ಆ ತಲೆಯು ಒಬ್ಬ ಬೆಸ್ತರವನಿಗೆ ದೊರಕುತ್ತದೆ. ಆತನು ಜೋಕಮಾರನನ್ನು ಗುರುತಿಸಿ, ತಮ್ಮ ಬೆಳೆಗಳನ್ನು ರಕ್ಷಿಸಿ ತಮ್ಮ ಬದುಕಿಗೆ ಆಧಾರವಾದ ಜೋಕಮಾರನ ತಲೆಯನ್ನು ಊರಿಗೆ ತಂದು, ಊರವರೆಲ್ಲಾ ಸೇರಿ ಜೋಕುಮಾರನಿಗೆ ಪೂಜೆ ಸಲ್ಲಿಸುತ್ತಾರೆ. ಅಂದಿನಿಂದ ಈ ಜೋಕಮಾರನ ಆಚರಣೆ ಬಂತೆಂಬ ಪ್ರತೀತಿ ಇದೆ. ಈ ಆಚರಣೆ ಸಂದರ್ಭದಲ್ಲಿ ಅತ್ಯಂತ ಅರ್ಥಗರ್ಭಿತವಾದ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ. ಅಂತಹ ಒಂದು ಹಾಡೆಂದರೆ:

**“ಅಡ್ಡಡ್ಡ ಮಳೆ ಬಂದು ದೊಡ್ಡ ದೊಡ್ಡ ಕೆರೆ ತುಂಬಿ**
**ಗೊಡ್ಡಗಳಲ್ಲಾ ಹೈನಾಗಿ ನಿನ್ನ ಕುಮಾರ್ನಗಡ್ಡಕ್ಕೆ**
**ಬೆಣ್ಣೆಲ್ಲೊ ಜೋಕುಮಾರ.**
**ಮಡಿವಾಳರ ಕೇರಿ ಹೊಕ್ಕಾನ ಜವಕುಮಾರ**
**ಮುಡಿ ತುಂಬಾ ಹೂ ಮುಡಿದಂತ ಚೆಲುವಿ ತನ್ನ**
**ಮಡದಿಯಾಗಬೇಕೆಂದ ಸುಕುಮಾರ”**

**2. ಗುರ್ಜಿ ಆಚರಣೆ:**

ಉತ್ತರ ಕರ್ನಾಟಕದ ಮುಳುಗಡೆ ಗ್ರಾಮಗಳಲ್ಲಿ ನಡೆಯುವ ವಿಶೇಷ ಆಚರಣೆಗಳಲ್ಲಿ ಇದು ಒಂದಾಗಿದೆ. ಮಳೆ ಬಾರದಿದ್ದಾಗ ಓಣಿ-ಓಣಿ ತಿರುಗಿ ಭಿಕ್ಷೆ ಬೇಡುವ ಆಚರಣೆ ವಿಶೇಷವಾಗಿದೆ. ತಲೆಯ ಮೇಲೆ ಕಪ್ಪೆಯನ್ನು ಹೊತ್ತು ನೀರು ಸುರಿದುಕೊಳ್ಳುತ್ತಾ ಬೀದಿ-ಬೀದಿ ತಿರುಗಿ ಭಿಕ್ಷೆ ಬೇಡುತ್ತಾ ಮಳೆ ಕರೆಯುತ್ತಾರೆ. ಭಿಕ್ಷೆ ಬೇಡಿದರೆ ಮಳೆ ಬರುತ್ತದೆ ಎಂಬ ಧೃಢ ನಂಬಿಕೆ ಈ ಆಚರಣೆಗೆ ಮೂಲ ಕಾರಣ. ಮುಖ್ಯವಾಗಿ ಊರಿನ ಯುವಕರು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಒಬ್ಬ ಯುವಕನ ತಲೆಯ ಮೇಲೆ ರೊಟ್ಟಿ ಹೆಂಚು (ಕಾವಲಿ) ಇಟ್ಟು, ಅದರ ಮೇಲೆ ಮಣ್ಣಿನ ಉಂಡೆಯನ್ನಿಟ್ಟು, ಅದರೊಳಗೆ ಒಂದು ಕಪ್ಪೆ ಮತ್ತು ಬರಿಕೆಯನ್ನು ಇಡುತ್ತಾರೆ. ಇದೇ ಗುರ್ಜಿ. ಈ ಗುರ್ಜಿಯನ್ನೊತ್ತ ಯುವಕನನ್ನು ಮುಂದೆ ಬಿಟ್ಟು ಯುವಕರ ಗುಂಪು ತಾಟು, ಜೋಳಿಗೆ ಇತ್ಯಾದಿಗಳೊಂದಿಗೆ ಆತನನ್ನು ಹಿಂಬಾಲಿಸುತ್ತಾರೆ. ಈ ಮೆರವಣಿಗೆ ಊರಿನ ಮನೆ-ಮನೆ ಮುಂದೆ ನಿಂತು:

**“ಗುರ್ಜಿ, ಗುರ್ಜಿ ಎಲ್ಲಾಡಿ ಬಂದೆ**
**ಹಳ್ಳ-ಕೊಳ್ಳ ಆರುಗ್ಯಾಡಿ ಬಂದೆ**
**ಹದ್ನಾರ ಎಮ್ಮಿ ಕಾಯಲಾರೆ**
**ಬಿಸಿ-ಬಿಸಿ ಸಗಣಿ ತುಳಿಯಲಾರೆ**
**ಬಣ್ಣ ಕೊಡ್ತನಿ ಬಾರಲೆ ಮಳೆಯೇ**

**ಸುಣ್ಣ ಕೊಡ್ತಿನಿ ಸುರಿಯಲೆ ಮಳೆಯೇ''**

ಹೀಗೆ ಸಾಗುತ್ತಾ ಹಾಡುನ್ನೇಳುತ್ತಾ ಎಲ್ಲಾ ಮನೆಗಳನ್ನು ತಿರುಗಿ, ಎಲ್ಲರಿಂದ ನೀರು ಹಾಕಿಸಿಕೊಂಡು, ಮನೆಯವರಿಂದ ಜೋಳ ಇತ್ಯಾದಿ ಸಂಗ್ರಹಿಸಿ ಮುಂದೆ ಸಾಗುತ್ತಾರೆ. ಹೀಗೆ ಸತತ ಐದು ದಿನಕಾಲ ನಡೆದು, ಐದನೇ ದಿನ ಮನೆ-ಮನೆಯಿಂದ ಸಂಗ್ರಹಿಸಿದ ಜೋಳದಿಂದ ಅಡುಗೆ ಮಾಡಿ ಎಲ್ಲರಿಗೂ ಊಟ ಹಾಕುತ್ತಾ ಮಳೆಗಾಗಿ ಪ್ರಾರ್ಥಿಸುವ ಒಂದು ಸಂಪ್ರದಾಯವಾಗಿದೆ.

**ಭೂಮಿ ಕುರಿತಾದ ಆಚರಣೆಗಳು:**

ನಮ್ಮ ಜನಪದರಿಗೆ ಭೂಮಿ ಕೇವಲ ಮಣ್ಣಲ್ಲ, ಕೋಟ್ಯಾಂತರ ಜೀವಿಗಳಿಗೆ ಆಶ್ರಯ, ಆಹಾರ ರಕ್ಷಣೆ ನೀಡಿ ಸಲಹುವ ಮಹಾತಾಯಿ. ಇದರಿಂದಾಗಿ ಇಂತಹ ಭೂಮಿ ತಾಯಿಯ ಆರಾಧನೆಗೆ ವಿವಿಧ ರೀತಿಯ ಆಚರಣೆಗಳು, ಕ್ರಿಯೆಗಳು, ಮಾರ್ಗಗಳು ದೇಶದ ವಿವಿಧ ಭಾಗಗಳಲ್ಲಿ ಪ್ರಚಲಿತದಲ್ಲಿವೆ. ಅಂತಹ ಪ್ರಮುಖ ಆಚರಣೆಗಳನ್ನು ಭಾರತದ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ವಿಧಗಳಲ್ಲಿ ಗುರುತುಸಬಹುದಾಗಿದೆ. ಅಂತಹ ಆಚರಣೆಗಳನ್ನು ಕರ್ನಾಟಕ(ಉತ್ತರ)ದಲ್ಲಿ ಶೀಗಿ ಹುಣ್ಣಿಮೆ, ಮಲೆನಾಡಿನ ಭೂಮಿ ಹುಣ್ಣಿಮೆ, ತುಳುನಾಡಿನ ಖೆಡ್ಡಾಸ, ರಾಜಸ್ಥಾನದ ಹಿಸೋರ್ತ್ರಿ ಪಶ್ಚಿಮ ಬಂಗಾಳದ ಹಲ್‌ಚಲ್ ಭೂಮಿಗೆ ಸಲ್ಲಿಸುವ ಪವಿತ್ರ ಆಚರಣೆಗಳಾಗಿವೆ. ಪ್ರಕೃತಿಯ ಎಲ್ಲಾ ಘಟಕಗಳಲ್ಲೂ ನಮ್ಮ ರೈತಾಪಿಗಳು ದೈವತ್ವವನ್ನು ಕಂಡು ಗೌರವಿಸುತ್ತಾರೆ. ಅದರಲ್ಲಿಯೂ ಬಹು ಮುಖ್ಯವಾಗಿ ಅವರಿಗೆ ನೆಲೆ, ಅನ್ನ, ಆಶ್ರಯ ನೀಡುವ ಭೂಮಿಯ ಮೇಲೆ ಅಪಾರ ಗೌರವ, ಭಕ್ತಿ, ಶ್ರದ್ಧೆಯನ್ನು ಹೊಂದಿರುತ್ತಾರೆ. ಅದು ಎಷ್ಟರ ಮಟ್ಟಿಗೆ ಎಂದರೆ ಯಾರಿಗಾದರೂ ಏನನನ್ನಾದರು ದೃಢಿಪಸಬೇಕಾದರೆ ಭೂತಾಯಿ ಮೇಲೆ ಪ್ರಮಾಣ ಹಾಕುವುದು ಗ್ರಾಮೀಣರಲ್ಲಿ ಸರ್ವೆ ಸಾಮಾನ್ಯ. ಹಾಗಾಗಿ ಭೂಮಿ ಕುರಿತಾದ ಅವರ ಆಚರಣೆಗಳೂ ಸಹ ನಾಡಿನಾದ್ಯಂತ ಸಮೃದ್ಧವಾಗಿವೆ ಅಂತಹ ಆಚರಣೆಗಳ ಪೈಕಿ ಮುಳುಗಡೆ ಗ್ರಾಮಗಳಲ್ಲಿ ಕಂಡು ಬರುವ ಪ್ರಮುಖ ಆಚರಣೆಯೆಂದರೆ ಶೀಗಿ ಹುಣ್ಣಿಮೆ.

**ಬೆಳೆ ಸಂಬಂಧಿ ಆಚರಣೆಗಳು:**

ರೈತ ಭೂಮಿಗೆ ಬೀಜ ಬಿತ್ತುವುದರಿಂದ ಆದಿಯಾಗಿ ಸಸಿ ನಾಟಿ ಮೊದಲುಗೊಂಡು ಫಸಲು ಬೆಳೆಯುವ ತನಕ ಹೊಲದಲ್ಲಿ ಗದ್ದೆಗಳು ವಿವಿಧ ರೀತಿಯ ಬೆಳೆ ಸಂಬಂಧಿ ಆಚರಣೆಗಳನ್ನು ಅನುಸರಿಸುತ್ತಾನೆ. ಬೆಳೆಯ ವಿವಿಧ ಹಂತದಲ್ಲಿ ಇವುಗಳು ಜರುಗುತ್ತವೆ. ಇವುಗಳ ಬಹುಮುಖ್ಯವಾದ ಉದ್ದೇಶ ಸಮೃದ್ಧವಾದ ಬೆಳೆಬಂದು ಫಸಲು ರೈತನ ಕೈಗೆ ಯಾವುದೇ ಅಡ್ಡಿ ಆಂತಕವಿಲ್ಲದೆ ಕೈಸೇರಲಿ ಎಂಬ ಕಾರಣಗಳಿಂದ ಇವುಗಳನ್ನು ಆಚರಿಸಲಾತ್ತದೆ. ಇವುಗಳಲ್ಲಿ ಕೇಲವು

ವೈಜ್ಞಾನಿಕವಾದಂತಹ ಅಂಶಗಳನ್ನು ಒಳಗೊಂಡಿರುವುದನ್ನು ಗಮನಿಸಬಹುದಾಗಿದೆ. ಅಂತಹ ಪ್ರಮುಖವಾದಂತಂಹ ಆಚರಣೆಗಳೆಂದರೆ:

**1. ಕೂರಿಗೆ ಪೂಜೆ:**

ವ್ಯವಸಾಯ ಕ್ಷೇತ್ರದಲ್ಲಿ ಬೀಜ ಬಿತ್ತನೆಗೆ ಬಳಸುವ ಒಂದು ಪ್ರಮುಖ ಉಪಕರಣವೆಂದರೆ ಕೂರಿಗೆ. ಸಾಮಾನ್ಯವಾಗಿ ಜೋಳ, ದ್ವಿದಳ ಧಾನ್ಯ, ಗೋಧಿ ಮುಂತಾದವುಗಳನ್ನು ಬಿತ್ತನೆ ಮಾಡಲು ಕೂರಿಗೆಯನ್ನು ಬಳಸುತ್ತಾರೆ. ಇದು ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಚಾಲ್ತಿಯಲ್ಲಿದೆ. ಐದು ಮತ್ತು ಏಳು ತಾಳುಗಳುಳ್ಳ ಅಂದರೆ ಐದು ಮತ್ತು ಏಳು ಸಾಲು ಬಿತ್ತುವ ಕೂರಿಗೆಗಳಿವೆ. ಕೂರಿಗೆಯ ದಿಂಡನ್ನು ಗಟ್ಟಿ ಮರದಲ್ಲಿ ಮಾಡಿದ್ದರೆ ಕೊಳವೆಗಳನ್ನು ಬಿದರಿನಿಂದ ಮಾಡಿರುತ್ತಾರೆ. ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಮುಳುಗಡೆ ಗ್ರಾಮಗಳಲ್ಲಿ ಜೋಳ ಬಿತ್ತನೆ ಮಾಡುವ ಪೂರ್ವದಲ್ಲಿ ಕೂರಿಗೆ ಪೂಜೆ ಮಾಡುವುದು ರೂಢಿ. ಉತ್ತರ ಕರ್ನಾಟಕ ಭಾಗದಲ್ಲಿ ಇದೊಂದು ಸಾಮುದಾಯಿಕ ಪ್ರಕ್ರಿಯೆ. ಅವರು ಕೂರಿಗೆಯನ್ನು ಮನೆಯಲ್ಲಿಯೇ ಇಟ್ಟು ಪೂಜಿಸಿ ನಂತರ ಹೊಲಕ್ಕೆ ತೆಗೆದುಕೊಂಡು ಹೋಗಿ ಬಿತ್ತನೆ ಪ್ರಾರಂಭಿಸುತ್ತಾರೆ. ಅಲ್ಲದೇ ಈ ಪೂಜೆಗೆ ಊರಿನ ಹಿರಿ-ಕಿರಿಯರನ್ನು ಪ್ರಸಾದಕ್ಕೆ ಬರಹೇಳುವುದು ರೂಢಿ. ಅಂದು ವಿಶೇಷ ಅಡುಗೆಗಳನ್ನು ಮಾಡಿ ಬಂದವರಿಗೆ ಊಟ ಬಡಿಸುತ್ತಾರೆ. ಇದರ ಆಚರಣೆ ಬಹುಮುಖ್ಯವಾದ ಉದ್ದೇಶವೆಂದರೆ ಬೆಳೆ ಉತ್ತಮವಾಗಿ ಬರಬೇಕಾದರೆ ಬೀಜ ಬಿತ್ತನೆ ಸಮರ್ಪಕವಾಗಿ ಹೊಲದ ಎಲ್ಲಾ ಭಾಗಗಳಲ್ಲಿ ಒಂದೇ ಪ್ರಮಾಣದಲ್ಲಿ ಬೀಳಬೇಕು. ಹಾಗೆ ಬೀಜ ಬೀಳಬೇಕಾದೆ ಬಿತ್ತುವ ಕೂರಿಗೆ ಸರಿಯಾಗಿದೆಯೋ ಇಲ್ಲವೋ ಪರೀಕ್ಷಿಸುವ ಸಲುವಾಗಿ ಕೂರಿಗೆ ಪೂಜೆಯನ್ನು ಬಿಚ್ಚಿ ಅದರ ಕೊಳವೆಗಳು, ಕೊಳವೆಯ ರಂಧ್ರಗಳು ಸರಿಯಾಗಿವೆಯೇ, ಸದೃಢವಾಗಿವೆಯೇ ಎಂದು ನೋಡಲಾಗುತ್ತದೆ. ಅದರಲ್ಲಿ ದೋಷವೇನಾದರೂ ಕಂಡು ಬಂದರೆ ಅದನ್ನು ಸರಿಪಡಿಸಿ ನಂತರ ಕೂರಿಗೆ ಪೂಜೆಗೆ ಅಣಿಯಾಗುತ್ತಾರೆ.

ಮನೆಯ ಮುಂದಿನ ಖಾಲಿ ಜಾಗದಲ್ಲಿ ಕಂಬಳಿ ಹಾಸಿ ಕೂರಿಗೆಯನ್ನು ಇಟ್ಟು ಅದರ ದಂಡಿಗಳಿಗೆ ಹೂವಿನ ಮಾಲೆಗಳನ್ನು ಹಾಕಿ, ದಿಂಡು ಮತ್ತು ಮೇಣಿಗೆ ಸೇರಿಸಿ ಸೀರೆ ಉಡಿಸುತ್ತಾರೆ, ಕುಪ್ಪಸ ತೊಡಿಸುತ್ತಾರೆ. ಕೂರಿಗೆಯ ಕೊಳವೆಯ ಭಾಗಕ್ಕೆ ಉಡಿ ಚೀಲವನ್ನು ಕಟ್ಟಿ ಅದಕ್ಕೆ ಬಿತ್ತನೆ ಜೋಳವನೇ ಹಾಕುತ್ತಾರೆ. ಚಿನ್ನದ ಆಭರಣಗಳಿಂದ ಅಲಂಕರಿಸಿ ಅಂತಿಮವಾಗಿ ಕೂರಿಗೆಗೆ ಹಿರಿಯರಿಂದ ಪೂಜೆ ಸಲ್ಲಿಸಲಾಗುತ್ತದೆ. ಸಾಮಾನ್ಯವಾಗಿ ಪೂಜೆಯ ಸಂದರ್ಭದಲ್ಲಿ ಜೋಳ, ಸಜ್ಜೆಯ ಕಡಬು, ಶೇಂಗಾ ಹೋಳಿಗೆ, ಅಗಸಿ ಚಟ್ನಿ, ಉಳ್ಳಾಗಡ್ಡಿ ವಿವಿಧ ರೀತಿಯ ಪಲ್ಯಗಳಿಂದ ಕೂಡಿದ

ಪ್ರಸಾದವನ್ನು ನೀಡುವುದು ವಾಡಿಕೆ.

**2. ಚರಗ ಚೆಲ್ಲುವ ಹಬ್ಬ:**

ಮುಳುಗಡೆ ಗ್ರಾಮಗಳನ್ನು ಒಳಗೊಂಡಂತೆ ಉತ್ತರ ಕರ್ನಾಟಕದಲ್ಲಿ ಆಚರಿಸುವ ಕೃಷಿ ಸಂಬಂಧಿ ಆಚರಣೆಗಳಲ್ಲಿ ಇದು ಮಹತ್ವದ ಆಚರಣೆಯಾಗಿದೆ. ಬೆಳೆಗಳಿಗೆ ಅಂಟುವ ರೋಗ ನಿವಾರಣಾರ್ಥವಾಗಿ ಚರಗ ಚೆಲ್ಲುವ ಆಚರಣೆ ವ್ಯವಸಾಯಗಾರರಲ್ಲಿ ದಟ್ಟವಾಗಿ ನೆಲೆಯೂರಿದೆ. ಚರಗ ಪದವನ್ನು ಕೇಳಿದಾಕ್ಷಣ ಸಾಮಾನ್ಯವಾಗಿ ನಮಗೆ ಎಳ್ಳಮವಾಸ್ಯೆ ನೆನಪಿಗೆ ಬರುತ್ತದೆ.

ವರ್ಷದ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಆಚರಿಸಲ್ಪಡುವ ಸಂಭ್ರಮದ ಆಚರಣೆ ಎಂದರೆ ಚರಗ ಚೆಲ್ಲುವ ಹಬ್ಬ. ಈ ತಿಂಗಳುಗಳು ಮುಂಗಾರಿನ ಬೆಳೆಗಳ ಕಟಾವು ಮತ್ತು ಹಿಂಗಾರಿನ ಬೆಳೆಗಳ ಬಿತ್ತನೆಗಳೆರಡೂ ಏಕಕಾಲಕ್ಕೆ ನಡೆಯುವ ಸಂಭ್ರಮದ ಸಮಯ. ಒಂದೆಡೆ ಮುಂಗಾರಿನ ಪ್ರಮುಖ ಬೆಳೆಯಾದ ಜೋಳದ ಕಟಾವು ನಡೆಯುತ್ತಿದ್ದರೆ, ಮತ್ತೊಂದೆಡೆ ಹಿಂಗಾರು ಬೆಳೆಗಳಾದ ಶೇಂಗಾ, ಕಡಲಿ, ಸೂರ್ಯಕಾಂತಿ, ಸಜ್ಜೆ ಮುಂತಾದ ಬೆಳೆಗಳ ಬಿತ್ತನೆ ನಡೆಯುತ್ತಿರುತ್ತದೆ. ಇದೇ ಸಂದರ್ಭದಲ್ಲಿ ಚರಗ ಚೆಲ್ಲುವ ಅಥವಾ ಎಳ್ಳಮಾಸ್ಯೆ ಸಡಗರ ಅಂದು ಎಲ್ಲರೂ ರಂಗುರಂಗಿನ ಬಟ್ಟೆ ತೊಟ್ಟು ಸಾಲಂಕೃತ ಸಾಲು-ಸಾಲು ಎತ್ತಿನ ಗಾಡಿಗಳು ಎಲ್ಲರ ಗಮನ ಸೆಳೆಯುತ್ತವೆ. ಈ ಆಚರಣೆಯ ದಿನದಂದು ಯುವಕರು ಬಂಡಿ/ಎತ್ತಿನ ಗಾಡಿ ತೊಳೆದು ಅದರ ಚಕ್ರಕ್ಕೆ ಕೀಲೆಣ್ಣೆ ಹಾಕಿ, ಎತ್ತುಗಳ ಮೈ ತೋಳದು ಅವುಗಳನ್ನು ಅಲಂಕರಿಸುತ್ತಾರೆ. ನಂತರ ಮನೆಯ ಎಲ್ಲ ಸದಸ್ಯರು ಸೇರಿ ಹೊಲದತ್ತ ಸಾಗುತ್ತಾರೆ. ಅವರು ತಮ್ಮ-ತಮ್ಮ ಹೊಲಗಳಿಗೆ ಹಸರಿನ ಬೆಳೆಹೊತ್ತ ಭೂಮಿ ತಾಯಿಗೆ ಅಂದು ಸೀಮಂತ ಮಾಡಿ ಸಂತಸ ಹಂಚಿಕೊಳ್ಳುವ ದಿನವೇ ಎಳ್ಳು ಅಮವಾಸ್ಯ. ಅಂದು ಹೊಲಕ್ಕೆ ಯಾರೇ ಬಂದರೂ ಅವರು ಅತಿಥಿಗಳು.

ಎಳ್ಳಮವಾಸ್ಯೆಯ ಅಡುಗೆ ವೈವಿಧ್ಯ ಅಪಾರ. ಹಿಂದಿನ ದಿನ ತಯಾರಿಸಿದ ಎಳ್ಳು ಹೋಳಿಗೆ, ಸಜ್ಜೆ ರೊಟ್ಟಿ, ಕರಿಗಡಬು, ಉಸಳಿ ಪಲ್ಯೆ, ಕೆನೆ ಮೊಸರು ಇತ್ಯಾದಿಗಳೊಂದಿಗೆ ಹೊಲಕ್ಕೆ ಸಾಗಿದ ನಂತರ ಬನ್ನಿ ಗಿಡದ ಕೆಳಗಡೆ ಭರಮ ದೇವರೆಂದು ಕರೆಯುವ ಐದು ಕಲ್ಲುಗಳನ್ನು ಇಟ್ಟು ಪೂಜೆಸುತ್ತಾರೆ. ನೈವೇದ್ಯವನ್ನು ಹೊಲದ ನಾಲ್ಕು ದಿಕ್ಕಿಗೂ “ಉಲ್ಲುಲ್ಲಗೋ... ಚಳಂಬ್ರಿಗೋ” ಎನ್ನುತ್ತಾ ಹೊಲದಲ್ಲಿ ಬೆಳೆದಿರುವ ಜೋಳದ ತೆನೆಗಳಿಗೆ ಅರಿಶಿನ-ಕುಂಕುಮ ಇಟ್ಟು, ಆರತಿ ಬೆಳಗಿ ಮನೆಯ ಹಿರಿಯ ಹೆಣ್ಣು ಮಕ್ಕಳು ಪೂಜಿಸುತ್ತಾರೆ. ಇದರ ಜೊತೆಗೆ ಎಳ್ಳಮವಾಸೆಯ ಮತ್ತೊಂದು ವಿಶೇಷವೆಂದರೆ ಅಂದು ಜೇನು ತಿಂದರೆ ಒಳ್ಳೆಯದು ಎಂಬ ಭಾವನೆಯಿದೆ. ಗಂಡಸರು ಹೊಲದಲ್ಲಿ ಜೇನು ಕಟ್ಟಿದ್ದರೆ ಕಿತು ತಂದು ತುಪ್ಪವನ್ನು

ಎಲ್ಲರಿಗೂ ಹಂಚುತ್ತಾರೆ. ಇದಾದ ನಂತರ ಹುಲಸಾಗಿ ಬೆಳೆ ಬರಲಿ ಎಂದು ಭೂಮಿ ತಾಯಿಗೆ ಉಡಿ ತುಂಬಿ ಊಟ ಮಾಡುತ್ತಾರೆ.

ಚರಗ ಚೆಲ್ಲುವ ಈ ಆಚರಣೆಯು ವೈಜ್ಞಾನಿಕ ತಳಹದಿಯನ್ನು ಕೂಡಾ ಹೊಂದಿದೆ. ಚರಗದಲ್ಲಿರುವ ಅನ್ನದಗಳು, ಕಾಳುಗಳು, ರೊಟ್ಟೆಯ ಚೂರುಗಳನ್ನು ತಿನ್ನಲು ಬರುವ ಹಕ್ಕಿಗಳು ಅಲ್ಲಿರುವ ಆಹಾರವನ್ನು ತಿಂದು ಮುಗಿಸಿದ ನಂತರ ಅಲ್ಲಿಯೇ ಕಣ್ಣಿಗೆ ಬೀಳುವ ಹುಳುಗಳನ್ನು ತಿಂದು ಹಾಕುತ್ತವೆ. ಹಾಗಾಗಿ ಚರಗ ಚೆಲ್ಲುವುದು ಕೀಟ ನಿವಾರಣೆ ಮಾಡುವ ಸರಳ ವಿಧಾನವೂ ಆಗಿದೆ ಎನ್ನಬಹುದು.

**3. ಗೂಡು ಪೂಜೆ:**

ಮಾನವ ಹೊಟ್ಟೆ ತುಂಬುವಷ್ಟು ಧಾನ್ಯ ಕೊಟ್ಟ ಮಣ್ಣು, ನೀರು, ಗಾಳಿ, ಪಶು-ಪಕ್ಷಿ ಮೊದಲಾದ ಜೀವ ಸಂಕುಲದ ಘಟಕಗಳಿಗೆ ಗೌರವದಿಂದ ನಮಿಸುವ ವಿಶಿಷ್ಟ ಆಚರಣೆಯೇ ಗೂಡು ಪೂಜೆ. ಜೀವ ಸಂಕುಲದ ವಿವಿಧ ಘಟಕಗಳನ್ನು ಒಂದಾಗಿ ಕಾಣುವ ರೈತ ತಾನು ಬೇಸಾಯ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಂದು ಜೀವಿ ಮತ್ತು ವಸ್ತುಗಳಿಗೂ ಗೌರವ ಸಲ್ಲಿಸುವ ಗೂಡು ಪೂಜೆ ಎಂಬುದು ರೈತ ಬಾಂಧವರಿಗೆ ಸಂಭ್ರಮದ ಕೆಲಸ. ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಆಯಾ ಕಾಲಕ್ಕೆ ತಕ್ಕ ಬೆಳೆಯನ್ನು ಬೆಳೆದ ರೈತರು ಹೊಲದಲ್ಲಿ ಗೂಡು ಪೂಜೆ ಮಾಡುತ್ತಾರೆ. ನಂತರ ರಾಶಿ ಮಾಡುವ ಕಾರ್ಯ ಆರಂಭಗೊಳ್ಳುತ್ತದೆ. ರಾಶಿಯ ಪ್ರತಿಯೊಂದು ಕಾಳು ಭೂತಾಯಿ ಕೊಟ್ಟ ವರವೆನ್ನುವಂತೆ ಸಂಭ್ರಮಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಅದರಲ್ಲಿಯೂ ಮುಳುಗಡೆ ವ್ಯಾಪ್ತಿಯ ಗ್ರಾಮಗಳಲ್ಲಿ ಜೋಳದ ಗೂಡು ಪೂಜೆ ಅತ್ಯಂತ ವಿಶೇಷವಾದದ್ದು. ಇದು ಸಾಮಾನ್ಯವಾಗಿ ನವೆಬರ್ ಡಿಸೆಂಬರ್ ತಿಂಗಳಿನಲ್ಲಿ ನಡೆಯುತ್ತದೆ. ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ತೆನೆ ಸಮೇತ ಕಟಾವು ಮಾಡಿ ಹೊಲದಲ್ಲಿಯೇ ಗೋಪುರಾಕೃತಿಯಲ್ಲಿ ಜೋಡಿಸಿರುತ್ತಾರೆ. ಇದನ್ನು ಗೂಡು ಎನ್ನುತ್ತಾರೆ. ಒಂದು ಶುಭದಿನ ಬೆಳಿಗ್ಗೆ ಹೋರಿಗಳನ್ನು/ಎತ್ತುಗಳನ್ನು ಹೂಡಿದ ಬಂಡಿಯಲ್ಲಿ ಬುತ್ತಿ ಸಮೇತ ಮನೆಯ ಹಿರಿಯರೊಬ್ಬರು ಹೊಲಕ್ಕೆ ಹೋಗಿ ಗೂಡಿಗೆ ಶ್ರದ್ಧೆ ಭಕ್ತಿಯಿಂದ ಪೂಜಿಸುತ್ತಾರೆ. ಹಿರಿಯರು ಹೊಲದ ಬದುವನ್ನು ಸುತ್ತು ಹಾಕಿ, ಸಜ್ಜೆ ಕಡುಬಿನ ನೈವೇದ್ಯವನ್ನು ಗೂಡಿನ ಮುಂದಿಟ್ಟು ಬೀಜ ಹೊತ್ತು ಬೆಳಸಿದ ಭೂಮಿ ತಾಯಿಗೆ ಮೊದಲ ತತ್ತು ಎನ್ನುತ್ತಾರೆ.

**ಜಾನುವಾರು ಸಂಬಂಧಿ ಆಚರಣೆಗಳು:**

ಜಾನುವಾರುಗಳಿಲ್ಲದೇ ನಮ್ಮ ಕೃಷಿಯನ್ನಾಗಲೀ, ಕೃಷಿಕನನ್ನಾಗಲೀ ಕಲ್ಪಿಸಿಕೊಳ್ಳಲೂ ಅಸಾಧ್ಯ. ಕೃಷಿ ಚಟುವಟಿಕೆಗಳಾದ ಉಳುಮೆ, ಸಾಗಾಣಿಕೆಗೆ,

ಗೊಬ್ಬರಕ್ಕೆ ದನಗಳು ಇರಲೇಬೇಕು. ತನ್ನ ಆರಂಭದ ಪ್ರತಿಯೊಂದು ಚಟುವಟಿಕೆಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ದನ-ಕರುಗಳಿಗೆ ವಿಶೇಷ ಗೌರವ ಸಲ್ಲಿಸುವ ರೈತ ತನ್ನ ಮನೆಯಲ್ಲಿ ಯಾವುದೇ ಹಬ್ಬ-ಹರಿದಿನವಾದರೂ ಅವುಗಳಿಗೆ ನಮಿಸುವ ಪರಿಪಾಠ ಇಟ್ಟುಕೊಂಡಿದ್ದಾನೆ. ರೈತ ಮತ್ತು ಜಾನುವಾರುಗಳ ಅವಿನಾಭಾವ ಸಂಬಂಧವನ್ನು ಸಾರುವ ಮತ್ತು ಅದನ್ನು ಮುಂದಿನ ತಲೆಮಾರುಗಳಿಗೆ ಕೊಂಡೊಯ್ಯುವ ಎಷ್ಟೋ ಜಾನುವಾರು ಸಂಬಂಧಿ ಆಚರಣೆಗಳು ಪ್ರಸ್ತುತ ಮುಳುಗಡೆಗೊಂಡ ಗ್ರಾಮಗಳಿಂದ ಕಣ್ಮರೆಗೊಂಡಿವೆ. ಇಲ್ಲಿ ಜಾನುವಾರುಗಳೇ ಮುಖ್ಯ ಕೇಂದ್ರವಾಗಿಟ್ಟುಕೊಂಡ ಅನೇಕ ಆಚರಣೆಗಳನ್ನು ಗುರುತಿಸ ಬಹುದಾಗಿದೆ. ಅಂತಹ ಪ್ರಮುಖ ಆಚರಣೆಗಳೆಂದರೆ:

**1. ಕಾರ ಹುಣ್ಣಿಮೆ:**

ಉತ್ತರ ಕರ್ನಾಟಕದ ಮಂದಿಗೆ ವಿಶೇಷ ಹಬ್ಬ ಇದಾಗಿದ್ದು ಜಾನುವರುಗಳೇ ಈ ಹಬ್ಬದ ಕೇಂದ್ರ ಬಿಂದು. ಮುಳುಗಡೆ ಗ್ರಾಮಗಳಲ್ಲಿ ಇದನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ದಕ್ಷಿಣ ಕರ್ನಾಟಕದ ಬಯಲು ಸೀಮೆಯಲ್ಲಿ ಸಂಕ್ರಾಂತಿ ಇರುವಂತೆ ಬಿಸಿಲು ನಾಡಿನವರಿಗೆ ಕಾರ ಹುಣ್ಣಿಮೆ. ಜೂನ್ ತಿಂಗಳ ಮಳೆಗಾಲದ ಆರಂಭದ ಸಮಯದಲ್ಲಿ ಈ ಹಬ್ಬ ನಡೆಯುವುದು ವಿಶೇಷ. ಅಂದು ಎತ್ತುಗಳಿಗೆ ಯಾವುದೇ ಕೆಲಸವಿಲ್ಲ. ಬೆಳಿಗ್ಗೆಯೇ ಮೈತೊಳೆದು ವಿವಿಧ ರೀತಿಯಲ್ಲಿ ಶೃಂಗರಿಸುತ್ತಾರೆ. ಹೀಗೆ ಶೃಂಗರಿಸಿದ ಎತ್ತಗಳನ್ನು ಕರಿ ಹರಿಯುವ ಸಂಪ್ರಾದಾಯವಿದೆ. ಈ ರೀತಿ ಮಾಡುವುದರ ಹಿಂದೆ ನಿರ್ದಿಷ್ಟವಾದ ಉದ್ದೇಶವೊಂದಿದೆ. ಯಾವ ಫಸಲು ಈ ವರ್ಷ ಉತ್ತಮವಾಗಿ ಆಗುತ್ತದೆ ಎಂಬುದನ್ನು ಇದರಿಂದ ರೈತರು ತಿಳಿಯುತ್ತಾರೆ. ಉದಾ: ಎತ್ತುಗಳ ಕರಿ ಹರಿದಾಗ ಕೆಂಪು ಬಣ್ಣದ ಎತ್ತು ಮುಂದೆ ಬಂದರೆ ಕೆಂಪು ಧಾನ್ಯಗಳು ಆ ವರ್ಷ ಉತ್ತಮವಾಗಿ ಬರುತ್ತವೆ. ಒಂದು ವೇಳೆ ಬಿಳಿ ಎತ್ತು ಮುಂದೆ ಬಂದರೆ ಬಿಳಿ ಫಸಲು ಅಂದರೆ ಬಿಳಿ ಜೋಳ, ಕುಸುಬೆ ಮುಂತಾದ ಉತ್ತಮ ಫಸಲು ನೀಡುತ್ತವೆ ಎಂದು ತೀರ್ಮಾನಿಸುತ್ತಾರೆ. ಅದೇ ದಿನ ಬೆಳಗಿನ ಸಮಯದಲ್ಲಿ ಜಾನುವಾರುಗಳಿಗೆ ಗೊಟ್ಟು ಹಾಕುತ್ತಾರೆ. ಗೊಟ್ಟು ಹಾಕುವುದು ಅತ್ಯಂತ ವಿಶೇಷವಾದ ಕ್ರಿಯೆ. ಎಳ್ಳೆಣ್ಣೆ ಮತ್ತು ಕೋಳಿ ಮೊಟ್ಟೆಯನ್ನು ಅರಿಶಿಣ ಮತ್ತು ಉಪ್ಪಿನೊಂದಿಗೆ ಮಿಶ್ರಣ ಮಾಡಿ ಬಿದರಿನ ಕೊಳವೆಯಿಂದ ರಾಸುಗಳಿಗೆ ಕುಡಿಸುತ್ತಾರೆ. ದನಗಳಿಗೆ ಇದನ್ನು ಕುಡಿಸುವುದರಿಂದ ಕಫ, ಪಿತ್ತದೋಷ ಮುಂತಾದ ಖಾಯಿಲೆಗಳು ನಿವಾರಣೆಯಾಗುವುದೆಂದು ರೈತರ ನಂಬಿಕೆ. ಮಳೆಗಾಲದ ಆರಂಭದ ದಿನವಾದ್ದರಿಂದ ಈ ರೀತಿ ಮಾಡುವ ಮೂಲಕ ಜಾನುವಾರುಗಳಿಗೆ ಪುಷ್ಟಿ ನೀಡುತ್ತಾರೆ. ಹೀಗೆ ಒಂದೇ ಆಚರಣೆಯ ಮೂಲಕ ಹಲವಾರು ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಜನಪದದ ಜ್ಞಾನ ಹಾಗೂ ಚಾತುರ್ಯ ಗಮನಾರ್ಹವಾದದ್ದು.

**2. ಮಣ್ಣೆತ್ತಿನ ಅಮವಾಸ್ಯೆ:**

ಕಾರ ಹುಣ್ಣಿಮೆಯ ನಂತರ ಮುಳುಗಡೆ ಗ್ರಾಮಗಳಲ್ಲಿ ಆಚರಣೆಯಲ್ಲಿ ಇರುವಂತಹ ಇನ್ನೊಂದು ಪ್ರಮುಖ ಜಾನುವಾರು ಸಂಬಂಧಿ ಆಚರಣೆಯೆಂದರೆ ಅದು ಮಣ್ಣೆತ್ತಿನ ಅಮವಾಸ್ಯೆ. ಕಾರ ಹುಣ್ಣಿಮೆ ನಂತರ ಬರುವ ಅಮವಾಸ್ಯೆಯನ್ನು ಉತ್ತರ ಕರ್ನಾಟಕದಲ್ಲಿ ಮಣ್ಣೆತ್ತಿನ ಅಮವಾಸ್ಯೆ ಎಂದು ಕರೆಯುತ್ತಾರೆ. ಕಾರ ಹುಣ್ಣಿಮೆಯಂದು ಜೀವಂತ ಜಾನುವಾರುಗಳಿಗೆ ಪೂಜೆ ನಡೆದರೆ ಮಣ್ಣೆತ್ತಿನ ಅಮವಾಸ್ಯೆಯಂದು ಮಣ್ಣಿನಲ್ಲಿ ಎತ್ತಗಳನ್ನು ಮಾಡುತ್ತಾರೆ. ಈ ಮಣ್ಣಿನ ಎತ್ತುಗಳನ್ನು ಪೂಜಿಸಿ, ಊರೆಲ್ಲಾ ಮೆರವಣಿಗೆ ಮಾಡಿ ನಂತರ ನೀರಿನಲ್ಲಿ ವಿಸರ್ಜನೆ ಮಾಡಲಾಗುತ್ತದೆ.

ಮುಳುಗಡೆ ಪ್ರದೇಶದ ಭಾಗದಲ್ಲಿ ಕಾರ ಹುಣ್ಣಿಮೆಗೆ ಹೊನ್ನಗ್ಗಿ ದಿವಸ ಎಂತಲ್ಲೂ ಕರೆಯುತ್ತಾರೆ. ಇಲ್ಲಿ ಹಬ್ಬದ ದಿನದಂದು ಪುಂಡಿನಾರಿನಲ್ಲಿ ಹಗ್ಗಗಳನ್ನು ತಯಾರಿಸಿ ಅವುಗಳನ್ನು ವಿವಿಧ ಬಣ್ಣಗಳಲ್ಲಿ ಅದ್ದಿ ಎತ್ತುಗಳಿಗೆ ಕಟ್ಟುತ್ತಾರೆ. ಅಂದು ಸಂಜೆ ಕರಿ ಹರಿಯುವ ಕಾರ್ಯಕ್ರಮ. ಮುಳುಗಡೆ ಪ್ರದೇಶದ ಭಾಗದಲ್ಲಿ ಕರಿ ಹರಿಯುವುದು ಸ್ವಲ್ಪ ಭಿನ್ನ. ಗ್ರಾಮದಲ್ಲಿರುವ ಕೆಂಪು ಮತ್ತು ಬಿಳಿ ಬಣ್ಣದ ಐದು ಎತ್ತುಗಳನ್ನು ಕರೆತಂದು ಅವುಗಳಿಗೆ ಗೌಡ ಮತ್ತು ಕುಲಕರ್ಣಿಯವರ ಎತ್ತುಗಳೆಂದು ಹೆಸರಿಡುತ್ತಾರೆ.

ಕೆಂಪು ಬಣ್ಣದ ಎತ್ತು ಮುಂಗಾರು ಮತ್ತು ಬಿಳಿ ಬಣ್ಣದ ಎತ್ತು ಹಿಂಗಾರಿನ ಸಂಕೇತ. ಕರಿ ಹರಿಯುವಾಗ ಕೆಂಪು ಎತ್ತು ಮುಂದೆ ಬಂದರೆ ಮುಂಗಾರು ಹೆಚ್ಚು ಮತ್ತು ಬಿಳಿ ಎತ್ತು ಮುಂದೆ ಬಂದರೆ ಹಿಂಗಾರು ಉತ್ತಮ ಎನ್ನುವುದು ರೈತರ ಅನುಭವದ ಮಾತು. ಕಾರು ಹುಣ್ಣಿಮೆಯೆ ಮರು ದಿವಸವನ್ನು ಕರಿದಿನ ಎನ್ನುತ್ತಾರೆ. ಅಂದು ಕರಿಗಡಬು ಇಲ್ಲವೇ ಬೆಲ್ಲದ ಗಾರಿಗೆ (ತಾಲಿ ಪೆಟ್ಟು ) ಎಂಬ ಸಿಹಿ ತಿನಿಸುಗಳನ್ನು ತಯಾರಿಸಿ ಎಲ್ಲರೂ ಹಂಚಿ ತಿನ್ನುವುದು ಈ ಪ್ರದೇಶದ ಸಂಪ್ರದಾಯ.

**ಉಪಸಂಹಾರ:**

ಹೀಗೆ ಮುಳುಗಡೆ ಪ್ರದೇಶದ ಸಂಸ್ಕೃತಿ, ಜನಜೀವನ ಮತ್ತು ಸಂಪ್ರದಾಯಗಳನ್ನು ಗಮನಿಸಿದರೆ ಸಾವಿರಾರು ವರ್ಷಗಳಿಂದ ಅವರ ದಿನ ನಿತ್ಯದ ಬದುಕಿನಲ್ಲಿ ಕೃಷಿ ಆಚರಣೆಗಳು ಹಾಸ ಹೊಕ್ಕಾಗಿರುವುದುನ್ನು ಗಮನಿಸಿಬಹುದಾಗಿದೆ. ಇವು ನಮ್ಮ ಕೃಷಿಕರ ವೈವಿಧ್ಯ ಪೂರ್ಣ ಬದುಕಿನ ಚಿತ್ರನವನ್ನು ಮೂಡಿಸುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಆಚರಣೆಯ ವಿಧಾನಗಳಲ್ಲಿ ಬದಲಾವಣೆಯಿರಬುಹುದು, ಆದರೆ ಉದ್ದೇಶ ಮಾತ್ರ ಒಂದೇ. ಆದ್ದರಿಂದ ಅದಕ್ಕನುಗುಣವಾಗಿ ಕೃಷಿ ಪದ್ಧತಿಗಳೂ ಸಹ ರೂಪಗೊಂಡಿವೆ.

ಕೃಷಿ ಆಚರಣೆಗಳು ಕೃಷಿಕರ ನಿಸರ್ಗಾರಾಧನೆ ಎಂಬ ಮಾತು ಸತ್ಯ. ಆದ್ದರಿಂದ ಬೀಜ ಬಿತ್ತನೆಯಿಂದ ಮೊದಲುಗೊಂಡು ಬೆಳೆ ಕಟಾವು, ರಾಶಿಯಾಗಿ ಕಾಳು ಮನೆಗೆ ಬರುವ ಪ್ರತಿಯೊಂದು ಹಂತದಲ್ಲೂ ಆಚರಣೆಗಳಿವೆ. ಈ ಆಚರಣೆಗಳ ಮೇಲೆಯೇ ಕೃಷಿಕರ ಬದುಕು ಸಾಗುತ್ತಾ ಬರುತ್ತದೆ. ಕೃಷಿ ಸಂಸ್ಕೃತಿಯ ಮುಖ್ಯ ಭಾಗವಾಗಿ ಸಾಗಿ ಬಂದಿರುವ ಈ ಆಚರಣೆಗಳು ಕೃಷಿಕರ ಬದುಕಿನ ರಕ್ಷಣೆಯ ಹೊಣೆ ಹೊತ್ತು ನಿಂತಿದ್ದವು. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಲ್ಲಿ ಭಾಗಶಃ ತಮ್ಮ ಕೃಷಿ ಭೂಮಿಯನ್ನು ಕಳೆದುಕೊಂಡ ಗ್ರಾಮಗಳಲ್ಲಿ, ಕೃಷಿ ಕುಟುಂಬಗಳಲ್ಲಿ ಕೃಷಿ ಸಂಬಂಧಿ ಆಚರಣೆಗಳು ಕಣ್ಮರೆಗೊಂಡಿವೆ. ಕಾರಣ ಕೃಷಿ ಭೂಮಿಯ ಕೊರತೆ ಹಾಗೂ ಆಧುನಿಕತೆಯ ಸ್ಪರ್ಶದಿಂದ ಕೃಷಿ ರಂಗದಿಂದ ಸಹಜವಾಗಿಯೇ ಆಚರಣೆಗಳು ನಿರ್ಗಮಿಸತೊಡಗಿವೆ. ಈ ಕೃಷಿ ಆಚರಣೆಗಳು ಚಿಕ್ಕ-ಚಿಕ್ಕ ಕ್ರಿಯೆಗಳಾದರೂ ಮನಸ್ಸಿಗೆ ಮುದ, ಧೈರ್ಯ, ಆತ್ಮ ವಿಶ್ವಾಸ ನೀಡುತ್ತಿದ್ದವು. ಅಂತಹ ಆಪ್ತ ವಾತಾವರಣದಿಂದ ಇಂದಿನ ಮುಳುಗಡೆ ಗ್ರಾಮಗಳಲ್ಲಿನ ಕೃಷಿಕ ವಂಚಿತನಾಗಿರುವುದೇ ದುರಂತ. ಮುಳಗಡೆ ಗ್ರಾಮಗಳಲ್ಲಿ ಉಳಿದಿರುವ ಹಿರಿ ತಲೆಗಳನ್ನು ಆಶ್ರಯಿಸಿ ಅಳಿದುಳಿದ ಆಚರಣೆಗಳನ್ನು ಸಮಗ್ರವಾಗಿ ದಾಖಲಿಸುವುದೇ ನಮಗಿರುವ ಮಾರ್ಗ.

**ಅಡಿ ಟಿಪ್ಪಣಿಗಳು:**

1. Sen, Bandhudas. (1974). The Green Revolution in India. University of Michigan.
2. Gupta C. S. (1966). Census of India 1961- Fairs And Festivals of Rajasthan Vol No-XIV. Navjivan Pulication Jaipur. Page No-95
3. ಹೊಸ ಪಾಳ್ಯ ಮಲ್ಲಿಕಾರ್ಜುನ. (2008). ಕೃಷಿ ಆಚರಣೆ: ದೇಸಿ ಕೃಷಿ ಜ್ಞಾನ ಸಂಪುಟ-05. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. ಪು.ಸಂ. 101

### ಪರಾಮರ್ಶನ ಗ್ರಂಥಗಳು:


1. ಕಿಲ್ಲೇದಾರ ಈರಯ್ಯ. (2004). ರೈತ ಪ್ರಹಸನಗಳು. ಆದಿತ್ಯ ಪ್ರಕಾಶನ. ಬೆಳಗಾವಿ.
2. ಹೊಸ ಪಾಳ್ಯ ಮಲ್ಲಿಕಾರ್ಜುನ. (2008). ಕೃಷಿ ಆಚರಣೆ: ದೇಸಿ ಕೃಷಿ ಜ್ಞಾನ ಸಂಪುಟ–05. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
3. ರೇಷ್ಮಾ ಟಿ. ಬಿ. (2016). ಕೊಡಗು ಜಿಲ್ಲೆಯ ಬೇಸಾಯ ಪರಂಪರೆಗಳ ಅಧ್ಯಯನ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
4. ಚಿಂದಾನಂದ ಮೂರ್ತಿ ಎಂ. (2009). ಕನ್ನಡ ಸಂಸ್ಕೃತಿ ಹಿರಿಮೆ ಗರಿಮೆ. ಮಹಾಕವಿ ಹರಿಹರ ಸ್ಮಾರಕ ಸಂಶೋಧನೆ ಕೇಂದ್ರ. ಹೊಸಪೇಟೆ.
5. ಶ್ರೀಯಾನ್ ಕೆ. ಆರ್. (2019). ಕರ್ನಾಟಕದ ರೈತ ಚಳುವಳಿ. ಕ್ರಿಯಾ ಪ್ರಕಾಶನ. ಬೆಂಗಳೂರು.
6. ಯಶವಂತ್ ಕುಮಾರ್ ಚಾ. ನಾ. (2016). ಬುಡಕಟ್ಟು ವೃತ್ತಿ ಮತ್ತು ಪರಂಪರಿಕ ಜ್ಞಾನ. ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು.
7. ಡಿಸೋಜ ನಾ. (1985). ಮುಳುಗಡೆ. ರವೀಂದ್ರ ಪುಸ್ತಕಾಲಯ. ಬೆಂಗಳೂರು.
8. ಪುರಾಣಿಕ ಶ್ರೀರಂಗ. (2019). ಕೃಷ್ಣಾ ತೀರದ ಕನಸುಗಳು, ಪುರಾಣಿಕ ಪ್ರಕಾಶನ. ವಿಜಯಪುರ.
9. ಕೋಡಿರಾಂಪುರ ರಂಗಾರೆಡ್ಡಿ (ಸಂ). (200)3. ಕರ್ನಾಟಕ ಜಾನಪದ ಮತ್ತು ಯಕ್ಷಗಾನ. ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು.
10. ವೆಂಕಟರಾವ್ ಡಿ. (2007). ಕೃಷಿ ಬೆಳೆವಣಿಗೆ. ವಿದ್ಯಾನಿಧಿ ಪ್ರಕಾಶನ. ಗದಗ.
11. ಕರ್ನಾಟಕದ ಪರಂಪರೆ–II. (ಸಂ). (1992). ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
12. ಕನ್ನಡ ವಿಷಯ ವಿಶ್ವಕೋಶ. (2006). ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.